ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 16.06.2026

ಮುಂದುವರೆದ ಮುಖ್ಯವಿಚಾರಣೆ ಶ್ರೀ ಎಸ ಸಿ ಎನ ವಕೀಲರಿಂದಃ ಪ್ರತಿವಾದಿಯ ಪರವಾಗಿ ಃ

1) ಓ ಎಸ ನಂ. 557/2019 ರಲ್ಲಿ ತೀರ್ಪು ಮತ್ತು ಡಿಕ್ರಿಯ ದೃಡಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ-103 ಮತ್ತು 104 ಎಂದು ಗುರುತಿಸಲಾಯಿತು.

2) ಆರ್ ಎ ನಂ. 31/2024 ರ ಅಫೀಲನ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-105 ಎಂದು ಗುರುತಿಸಲಾಯಿತು.

3) ಆರ್ ಎ ನಂ. 31/2024 ರ ತೀರ್ಪು ಮತ್ತು ಡಿಕ್ರಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-106 ಮತ್ತು 107 ಎಂದು ಗುರುತಿಸಲಾಯಿತು.

4) ಖಾಸಗಿ ದೂರು ಸಂ. 8/2020 ರ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-108 ಎಂದು ಗುರುತಿಸಲಾಯಿತು.

5) ಓಎಸ ನಂ. 332/2016 ರ ರೋಜನಾಮೆಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-109 ಎಂದು ಗುರುತಿಸಲಾಯಿತು.

6) ಓಎಸ ನಂ. 332/2016 ರ ವಾದ ಪತ್ರದ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-110 ಎಂದು ಗುರುತಿಸಲಾಯಿತು.

7) ಓಎಸ ನಂ. 332/2016 ರ ರಾಜಿ ಪತ್ರದ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-111 ಎಂದು ಗುರುತಿಸಲಾಯಿತು.

8) ಓಎಸ ನಂ. 332/2016 ರ ರಾಜಿ ಡಿಕ್ರಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-112 ಎಂದು ಗುರುತಿಸಲಾಯಿತು.

9) ಓಎಸ ನಂ. 354/2016 ರ ವಾದ ಪತ್ರದ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-113 ಎಂದು ಗುರುತಿಸಲಾಯಿತು.

10) ಓಎಸ ನಂ. 354/2016 ರ ರಾಜಿ ಪತ್ರದ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-114 ಎಂದು ಗುರುತಿಸಲಾಯಿತು.

11) ಓಎಸ ನಂ. 354/2016 ರ ರಾಜಿ ಡಿಕ್ರಿಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-115 ಎಂದು ಗುರುತಿಸಲಾಯಿತು.

12) ಓಎಸ ನಂ. 354/2016 ರ ರೋಜನಾಮೆಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-116 ಎಂದು ಗುರುತಿಸಲಾಯಿತು.

13) ದಿನಾಂಕ 28.08.2017 ರ ನೋಂದಾಯಿತ ಮೃತ್ಯು ಪತ್ರದ ದೃಡಿಕೃತ ಪ್ರತಿಯನ್ನು ನಿಡಿ-117 ಎಂದು ,

14) ಹಕ್ಕು ಬದಲಾವಣೆ ವಹಿಯ ದೃಡಿಕೃಪತ ಪ್ರತಿಯನ್ನು ನಿಡಿ-118 ಎಂದು ,

15) ನನ್ನ ತಾಯಿಗೆ ಗ್ರಾಮ ಲೆಕ್ಕಾಧಿಕಾರಿಗಳಿಗೆ ನೀಡಿದ ಅರ್ಜಿಯ ಪ್ರತಿಹಗಳನ್ನು ನಿಡಿ-119 ಮತ್ತು 120 ಎಂದು ಗುರುತಿಸಲಾಯಿತು.

16) ತಹಶೀಲ್ದಾರವರ ಆದೇಶದ ಗಣಕೀಕೃತ ಪ್ರತಿಯನ್ನು ನಿಡಿ-121 ಎಂದು ಗುರುತಿಸಲಾಯಿತು.

17) ಹಕ್ಕು ಬದಲಾವಣೆ ವಹಿಯ ಗಣಕೀಕೃತ ಪ್ರತಿಯನ್ನು ನಿಡಿ-122 ಎಂದು ,

18) ಪಹಣಿ ಪತ್ರಿಕೆಗಳ ಪ್ರತಿಗಳನ್ನು ಹಾಜರುಪಡಿಸಿದ್ದು ನಿಡಿ-123 ರಿಂದ 201 ಎಂದು ಗುರುತಿಸಲಾಯಿತು.

19) ಖಾಸರಾ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-202 ರಿಂದ 204 ಎಂದು ಗುರುತಿಸಲಾಯಿತು.

ಪಾಟೀಸವಾಲು ಪ್ರತಿವಾದಿ 3 ರಿಂದ 8 ರವರ ಪರ ಶ್ರೀ ಎಂ ಎಂಎಂ ವಕೀಲ ರಿಂದ ಃ

ನಾನು ವಿದ್ಯಾಬ್ಯಾಸ ಮಾಡಿರುವುದಿಲ್ಲ. ಆ ಕಾರಣದಿಂದ ನನಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆಯನ್ನು ನಾವು ಮಾಸನಗೌಡ ಮತ್ತು ರಾಮನಗೌಡರ ಮೇಲೆ ಹಾಕಿರುತ್ತೇವೆ. ದಾವೆಯನ್ನು ಜಮೀನಿನ ಕುರಿತು ಹಾಕಿರುತ್ತೇವೆ. ಅದರ ಸರ್ವೆ ನಂಬರ ಗೊತ್ತಿಲ್ಲ. ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವೆಯನ್ನು 25 ಎಕರೆ ಜಮೀನಿನ ಕುರಿತು ಸಲ್ಲಿಸಿರುತ್ತೇನೆ. ಸದರಿ 25 ಎಕರೆ ಜಮೀನಿನ ಸರ್ವೆ ನಂಬರಗಳು ಬೇರೆ ಬೇರೆ ಇರುತ್ತವೆ. ಸದರಿ ಜಮೀನಿನ ಮೂಲ ಮಾಲೀಕರು ಜಾಲಮ್ಮಾ ಇರುತ್ತಾರೆ. ಜಾಲಮ್ಮಳ ಪುರ್ತಿ ಹೆಸರು ಜಾಲಮ್ಮ ಗಂಡ ಮಾಸಪ್ಪ ಪೂಜಾರ ಇರುತ್ತದೆ. ಈ ಕುರಿತು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಜಮೀನಿನ ಮೂಲ ಮಾಲೀಕರು ಜಾಲಮ್ಮ ಮಾಸಪ್ಪ ಪೂಜಾರ ಎಂದು ತೋರಿಸಲು ಯಾವುದೆ ದಾಖಲಾತಿಯನ್ನು

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ಮೂಲ ಮಾಲೀಕರು ಜಾಲಮ್ಮ ಮಾಸಪ್ಪ ಪೂಜಾರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆ ಪಶ್ಚಿಮ ದಿಕ್ಕಿಗೆ ಇದ್ದು, ಮಾಸನಗೌಡರ ಮನೆ ಪೂರ್ವ ದಿಕ್ಕಿನಲ್ಲಿ ಇದ್ದು ಎರಡು ಮನೆಗಳ ಮದ್ಯೆ ರಸ್ತೆ ಇದೆ ಎಂದರೆ ಸರಿ. ನಮ್ಮ ಎರಡು ಮನೆಗಳ ಬಾಗಿಲುಗಳು ನೇರವಾಗಿದ್ದು ಈ ಮನೆಯ ಒಳಗಿನ ದೃಷ್ಯ ಎದುರು ಮನೆಗೆ ಹಾಗೂ ಎದುರು ಮನೆಯ ದೃಷ್ಯ ಈ ಮನೆಗೆ ಕಾಣುತ್ತದೆ ಎಂದರೆ ಸರಿ. ಆ ಕಾರಣದಿಂದ ಮಾಸನಗೌಡ ಮನೆಯ ಸಂಪೂರ್ಣ ವಿಷಯಗಳು ನನಗೆ ಗೊತ್ತಿದೆ ಎಂದರೆ ಸರಿ.

ಮಾಸನಗೌಡನ ತಂದೆ ಹೆಸರು ಕನಕನಗೌಡ ಎಂದರೆ ಸರಿ. ಕನಕನಗೌಡರ ಹೆಂಡತಿ ಹೆಸರು ಶಂಕ್ರವ್ವ ಎಂದರೆ ಸರಿ. ಕನಕನಗೌಡ ಮತ್ತು ಶಂಕ್ರವ್ವಳ ವೈವಾಹಿಕ ಜೀವನದಿಂದ ಕಾಂತವ್ವ , ಬಸನಗೌಡ , ರಾಜನಗೌಡ , ಮಾಸವ್ವ, ಪಾರ್ವತೆವ್ವ , ಮಾಸನಗೌಡ ಎಂಬ ಮಕ್ಕಳು ಇದ್ದರು ಎಂದರೆ ಸರಿ. ಕನಕನಗೌಡರ ತಮ್ಮನ ಹೆಸರು ಮಾಸನಗೌಡ ಎಂದರೆ ಸರಿ. ಕನಕನಗೌಡ ಮತ್ತು ಮಾಸನಗೌಡರ ತಂಗಿ ಮಲ್ಲವ್ವ ಎಂದರೆ ಸರಿ. ಮಾಸನಗೌಡರ ಹೆಂಡತಿ ಹೆಸರು ಯಮನವ್ವ ಎಂದರೆ ಸರಿ. ಅವರಿಗೆ ಕಸ್ತೂರೆವ್ವ , ರಾಮನಗೌಡ , ಲಕ್ಷ್ಮಣನಗೌಡ , ಬಾಲವ್ವ , ದೊಡ್ಡನಗೌಡ , ಕಲ್ಲನಗೌಡ ಎಂಬ ಮಕ್ಕಳು ಎಂದರೆ ಸರಿ.

ಕನಕನಗೌಡ , ಮಾಸನಗೌಡರ ಮತ್ತು ಮಲ್ಲವ್ವ ರವರ ತಂದೆ ಹೆಸರು ಭೀಮನಗೌಡ ಎಂದರೆ ಸರಿ. ಸದರಿ ಭೀಮನಗೌಡರು ಮೂಲತಹಃ ಗೋರೆಬಾಳ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಈ ಕುಟುಂಬಕ್ಕೆ ದತ್ತಕ ಬಂದಿದ್ದರು ಎಂದು ನುಡಿಯುತ್ತಾರೆ. ಭೀಮನಗೌಡರ ಹೆಂಡತಿ ಹೆಸರು ಮಾಸವ್ವ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಭೀಮನಗೌಡರ ಹೆಂಡತಿ ಹೆಸರು ಮಾಸವ್ವ ಎಂದು ಬರೆಸಿದ್ದೇನೆ ಎಂದರೆ ಸಾಕ್ಷಿಯು ಈ ಕುರಿತು ನನ್ನ ಮಗನಿಗೆ ಗೊತ್ತು ಎಂದು

ನುಡಿದಿರುತ್ತಾರೆ. ನನ್ನ ಮಗನ ಹೆಸರು ಮಾಸಪ್ಪ ಇರುತ್ತದೆ. ತಕರಾರು ಸಲ್ಲಿಸಲು ಮಾಹಿತಿಯನ್ನು ಮಾಸಪ್ಪ ನೀಡಿದ್ದಾರೆ ಎಂದರೆ ಸರಿ. ನನ್ನ ಮಗ ಮಾಸಪ್ಪ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ನನ್ನ ಮಗ ಹೇಳಿ ಕೊಟ್ಟ ಮೇರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

ಭೀಮನಗೌಡರ ಹೆಂಡತಿ ಹೆಸರು ಮಾಸವ್ವ ಎಂದರೆ ಸರಿ. ಸದರಿ ಮಾಸವ್ವಳ ತಂದೆ ಹೆಸರು ದ್ಯಾಮನಗೌಡ ಮಾಲೀಪಾಟೀಲ ಸಾಃ ಹಿರೇ ನಂದಿಹಾಳ ಎಂದರೆ ಸರಿ. ಸದರಿ ಮಾಸವ್ವಳ ತಾಯಿಯ ಹೆಸರು ಗೌರಮ್ಮ ಎಂದರೆ ಸರಿ. ಗೌರಮ್ಮ ದ್ಯಾಮನಗೌಡರ ಮಗಳ ಹೆರು ಮಾಸವ್ವ ಎಂದರೆ ಸರಿ. ಗೌರಮ್ಮಳ ತಂದೆ ಹೆಸರು ಕನಕನಗೌಡ ಎಂದರೆ ಸರಿ. ಗೌರಮ್ಮಳ ತಾಯಿ ಹೆಸರು ಬಾಲವ್ವ ಎಂದರೆ ಸರಿ. ಬಾಲವ್ವಳ ಗಂಡನ ಹೆಸರು ಕನಕನಗೌಡ ಎಂದರೆ ಸರಿ. ಗೌರಮ್ಮಳ ತಮ್ಮನ ಹೆಸರು ಬಸನಗೌಡ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಮೃತಪಟ್ಟಿರುತ್ತಾರೆ. ಗೌರಮ್ಮಳ 2 ನೇ ಮಗ ಬಸನಗೌಡ ಎಂದರೆ ಸರಿ. ಸದರಿ ಬಸನಗೌಡರವರಿಗೆ ಇಬ್ಬರು ಹೆಂಡತಿ ಇದ್ದು ಅವರೆಂದರೆ ಶಾಂವತ್ರವ್ವ ಮತ್ತು ಮಲ್ಲವ್ವ ಎಂದರೆ ನನಗೆ ಗೊತ್ತಿಲ್ಲ. ಮಾಸನಗೌಡ ಅತ್ತೆ ಮಲ್ಲವ್ವಳಿಗೆ ಹಿರೇ ನಂದಿಹಾಳಕ್ಕೆ ವಿವಾಹ ಮಾಡಿ ಕೊಡಲಾಗಿದೆ ಎಂದರೆ ಸರಿ. ಮಲ್ಲವ್ವಳ ಗಂಡನ ಹೆಸರು ಏನು ಎಂದು ನನಗೆ ಗೊತ್ತಿಲ್ಲ. ನಾನು ಮೇಲೆ ಹೇಳಿದ ಎಲ್ಲರ ವಂಶಾವಳಿ ಒಂದೆ ಎಂದರೆ ಸರಿ.

ಮಾಸನಗೌಡರ ಹೆಂಡತಿ ಚಂದ್ರಕಲಾ ಪೂಜಾರ ಎಂದರೆ ಸರಿ. ಚಂದ್ರಕಲಾ ಪೂಜಾರರವರ ತಂದೆ ನಮಗೆ ಅಣ್ಣತಮ್ಮಂದಿರ ಆಗಬೇಕು. ಸದರಿ ಚಂದ್ರಕಲಾ ಪೂಜಾರ ರವರು 2015 ರ ಗ್ರಾಮ ಪಂಚಾಯತ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆತನದ ಹಿರಿತನವನ್ನು ನನ್ನ ಹೆಂಡತಿ ಗೌರಮ್ಮ ಮಾಡುತ್ತಾರೆ. ಸದರಿ ಗೌರಮ್ಮ ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ ಎಂದರೆ

ಸರಿ. ಗೌರಮ್ಮಳು ಕೂಡಾ ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದು ಆ ಕಾರಣದಿಂದ ಚಂದ್ರಕಲಾ ಪೂಜಾರವರಿಗೆ ನಾಮ ಪತ್ರ ವಾಪಸ ಪಡೆಯುವಂತೆ ನಾವು ಕೋರಿದ್ದೆವು ಎಂದರೆ ಸರಿಯಲ್ಲ. ಬಸಪ್ಪ ಮ್ಯಾಗಲಮನಿ , ತೀರ್ಥಪ್ಪ ಮ್ಯಾಗಲಮನೆ , ಶಂಕ್ರಪ್ಪ ಚಳಗೇರಿ , ಶಾಂತವ್ವ ಬಸಪ್ಪ ಮ್ಯಾಗಲಮನಿ ರವರ ಪರಿಚಯ ಇರುವುದಿಲ್ಲ. ಸದರಿಯವರು ಕಬ್ಬುರಗಿ ಗ್ರಾಮದವರು ಎಂದರೆ ಸರಿ. 2015 ರ ಗ್ರಾಮ ಪಂಚಾಯತ ಚುನಾವಣೆಯಲ್ಲಿ ಶಾಂತವ್ವ ಬಸಪ್ಪ ಮ್ಯಾಗಲಮನಿ ರವರು ಚಂದ್ರಕಲಾ ಪೂಜಾರ ರವರ ವಿರುದ್ದ ಸ್ಪರ್ಧಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚಂದ್ರಕಲಾರವರನ್ನು ಮಂಜುಳಾ ಎಂದು ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚುನಾವಣೆಯಲ್ಲಿ ಮಂಜುಳಾ ಯಾನೆ ಚಂದ್ರಕಲಾ ರವರು ವಿಜೇತರಾಗಿದ್ದರು ನಾನು ಸಹಕರಿಸಿದ ಶಾಂತವ್ವರವರು ಪರಾಭವಗೊಂಡರು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ನಾವು ಅವರ ವಿರುದ್ದ ದ್ವೇಷ ಸಾಧಿಸುತ್ತಾ ಬಂದಿದ್ದೆವೆ ಎಂದರೆ ಸರಿಯಲ್ಲ.

ಲಕ್ಷ್ಮಣಗೌಡರ ತಮ್ಮ ಕಲ್ಲನಗೌಡರ ಪರಿಚಯ ಇರುತ್ತದೆ. ಸದರಿ ಕಲ್ಲನಗೌಡ ಮತ್ತು ನನ್ನ ಮಗ ಮಾಸವ್ವ ಒಂದೇ ರಾಜಕೀಯ ಪಕ್ಷದವರು ಎಂದರೆ ಸರಿಯಲ್ಲ. ಆ ಕಾರಣದಿಂದ ಕಲ್ಲನಗೌಡ ಕುಟುಂಬದವರಿಗೂ ಮತ್ತು ಮಾಸನಗೌಡರ ಕುಟುಂಬದವರಿಗೆ ವೈಮನಸ್ಸು ಇದೆ ಎಂದರೆ ಸರಿ. ನನ್ನ ಹೆಸರನ್ನು ಶಾಲಾ ದಾಖಲಾತಿಯಲ್ಲಿ ಸೇರಿಸಿರುತ್ತಾರೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ 70 ವರ್ಷ ವಯಸ್ಸು ಇರುತ್ತದೆ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ಸದರಿ ವಯಸ್ಸಿನ ಕುರಿತು ತೋರಿಸಲು ದಾಖಲಾತಿಯನ್ನು ತೋರಿಸಿದ ಬಗ್ಗೆ ನನ್ನ ಮಗನಿಗೆ ಗೊತ್ತಿರುತ್ತದೆ. ನನಗೆ 70 ವರ್ಷ ವಯಸ್ಸು ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ 6 ಜನ ಮಕ್ಕಳು ಇರುತ್ತಾರೆ. ಅವರ ಪೈಕಿ

ಮೊದಲನೆಯವರು ಮಾಸಪ್ಪ ಇರುತ್ತಾನೆ. ನನಗೆ 20 ನೇ ವಯಸ್ಸಿನಲ್ಲಿ ವಿವಾಹ ವಾಗಿರುತ್ತದೆ. ಮಾಸಪ್ಪ ನನ್ನ ವಿವಾಹವಾದ ಎಷ್ಟು ವರ್ಷದ ನಂತರ ಜನಿಸಿದ್ದಾನೆ ಎಂದು ನನಗೆ ಗೊತ್ತಿಲ್ಲ. ಈಗ ಮಾಸಪ್ಪನಿಗೆ 23-24 ವರ್ಷ ವಯಸ್ಸು ಇರಬಹುದು ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ನನ್ನ ವಿವಾಹವಾದ 3-4 ವರ್ಷದ ನಂತರ ಮಾಸಪ್ಪ ಹುಟ್ಟಿರುತ್ತಾರೆ ಎಂದರೆ ಸರಿ. ಈ ಕಾರಣದಿಂದ ನನಗೆ ವಿಷಯ ಗೊತ್ತಿದೆ ಎಂದು ತೋರಿಸಲು 70 ವರ್ಷ ವಯಸ್ಸಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-109 ರಿಂದ 112 ರಲ್ಲಿನ ಓ ಎಸ ನಂ. 332/2016 ಪ್ರಕರಣವನ್ನು ನಾನು ಮಾಸನಗೌಡರ ವಿರುದ್ದ ಹಾಕಿರುತ್ತೇನೆ. ಸದರಿ ದಾಖಲಾತಿಯನ್ನು ಹೊಲದ ಕುರಿತು ಹಾಜರುಪಡಿಸಿರುತ್ತೇನೆ. ಸದರಿ ಪ್ರಕರಣವನ್ನು ಯಾವ ಆಸ್ತಿಯ ಕುರಿತು ಸಲ್ಲಿಸಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಪ್ರಕರಣಕ್ಕೆ ಮಾಹಿತಿಯನ್ನು ನನ್ನ ಮಗ ಮಾಸಪ್ಪ ನೀಡಿರುತಾರೆ. ಸದರಿ ದಾವೆಯನ್ನು ಚಂದಾಲಿಂಗಪ್ಪ ರವರು ಜಾಲವ್ವ ಯಾನೆ ಜಾನವ್ವ ಗಂಡ ಮಾಸಪ್ಪ ರವರ ವಿರುದ್ದ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾಖಲಾತಿಗಳ ಪ್ರಕಾರ 4 ನೇ ದಾವಾ ಸ್ವತ್ತನ್ನು ದಿನಾಂಕ 09.07.2016 ರಂದು ರಾಜಿ ಡಿಕ್ರಿ ಮೂಲಕ ನನ್ನ ತಾಯಿ ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಗನಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ನನ್ನ ಮಗ ಮಾಸಪ್ಪ ಪಕ್ಷಗಾರನಾಗಿದ್ದು ನ್ಯಾಯಾಲಯದಲ್ಲಿ ಜಾಲವ್ವರಿಂದ ಆಸ್ತಿಯನ್ನು ಮಾಡಿಸಿಕೊಂಡಿರುತ್ತಾರೆ. ಮೇಲ್ಕಂಡ ದಾಖಲಾತಿ ಪ್ರಕಾರ ಜಾಲವ್ವ ನನಗೆ ಆಸ್ತಿ ಬಿಟ್ಟು ಕೊಟ್ಟ ಬಗ್ಗೆ ನಮೂದು ಇದೆ ಎಂದರೆ ಸರಿ. ಆ ಕಾರಣದಿಂದ 4 ನೇ ದಾವಾ ಸ್ವತ್ತಿನಲ್ಲಿ ದಿನಾಂಕ 09.07.2016 ರ ನಂತರ ಜಾಲವ್ವಳಿಗೆ ಯಾವುದೇ ಹಕ್ಕು ಉಳಿದಿರಲಿಲ್ಲ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಗನಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೊರಿದ್ದರಿಂದ ಅನುಮತಿ ನೀಡಿ ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಕುಷ್ಟಗಿ